ಉ) ಅವಿರತವಾಗಿ ನಷ್ಟ ಅನುಭವಿಸುತ್ತಿರುವ ಈ ನಿಗಮವನ್ನು ಮುಚ್ಚುವ ಸಲಹೆಗಳೇನಾದರೂ ಇವೆಯೇ ?

ಶ್ರೀ ಬಸವರಾಜ್ ಪಟೇಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ಹೌದು,

ಆ) ಬೆಂಗಳೂರಿನ ನಗರದ ಕಸಕಡ್ಡಿಗಳಿಂದ ಕಾಂಪೋಸ್ಟ್ ಗೊಬ್ಬರ ತಯಾರು ಮಾಡಿ ಬೆಂಗಳೂರು ನಗರ ಮತ್ತು ನಗರದ ಸುತ್ತ ಮುತ್ತಲಿನ ರೈತರಿಗೆ ಮಾರಾಟ ಮಾಡುವುದು

ಇ) ಈ ನಿಗಮಕ್ಕೆ ಈ ಕೆಳಕಂಡ ಏಜೆನ್ಸಿಗಳು ಹಾಕಿದ ಬಂಡವಾಳ ಒಟ್ಟು ೭೫.೬೧ ಲಕ್ಷ ರೂ. ಗಳು

೧) ಭಾರತ ಸರ್ಕಾರ ೨) ಕರ್ನಾಟಕ ಸರ್ಕಾರ

೩) ಕರ್ನಾಟಕ ಕೃಷಿ ಕೈಗಾರಿಕಾ ನಿಗಮ ೪) ಬೆಂಗಳೂರು ಮಹಾಪಾಲಿಕೆ,

೫) ಕರ್ನಾಟಕ ರಾಜ್ಯ ಮಾರಾಟ ಮಹಾಮಂಡಳಿ,

ಈ) ನಿಗಮವು ಈ ಕೆಳಕಂಡ ಮುಂಖ್ಯ ಕಾರಣಗಳಿಂದಾಗಿ ನಷ್ಟವನ್ನು ಅನುಭವಿಸುತ್ತಿದೆ.

೧) ದಿನಕ್ಕೆ ಬೇಕಾದ ೨೦೦ ಟನ್ ಕಸಕಡ್ಡಿಗಳು ಪೂರ್ತಿಯಾಗಿ ಸರಬರಾಜು ಆಗದೇ ಇರುವುದು,

೨) ಮಳೆಗಾಲದಲ್ಲಿ ಸಾಕಷ್ಟು ಕೆಲಸವಿಲ್ಲದೆ ಇರುವುದು,

೩) ನಿಗಮದಲ್ಲಿ ಕೆಲವು ಯಂತ್ರಗಳಿಲ್ಲದೆ ಮುಂಖ್ಯ ಯಂತ್ರವು ಮೊದಲಿನಿಂದಲೂ ಪೂರ್ಣ ಉಪಯೋಗವಾಗದಿರುವುದು ಮತ್ತು ಲಾರಿಗಳಿಲ್ಲದಿರುವುದು,

೪) ಕಾಂಪೋಸ್ಟ್ ಗೊಬ್ಬರಕ್ಕೆ ನಿಗದಿಪಡಿಸಿರುವ ಬೆಲೆಗಳಲ್ಲಿ ನಿಗಮವು ಉತ್ಪಾದಿಸಿದ ಎಲ್ಲಾ ಗೊಬ್ಬರಗಳನ್ನು ರೈತರು ಕೊಳ್ಳದಿರುವುದು.

ಉ) ಇಲ್ಲ

ಪ್ರೈಮರಿ ಸ್ಕೂಲಿನಲ್ಲಿ ಉಪಾಧ್ಯಾಯರ ಅಭಾವದ ಬಗ್ಗೆ

೫೬೬. (ಎ) ಶ್ರೀ ಧರ್ಮಪ್ಪ(ಸಾಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರಾಥಮಿಕ ಶಾಲೆಗಳಿಗೆ ಸಾಕಷ್ಟು ಉಪಾಧ್ಯಾಯರುಗಳನ್ನು ಮೂರು ತಿಂಗಳೊಳಗಾಗಿ ನೇಮಕ ಮಾಡುವುದಾಗಿ ಸಂಬಂಧಪಟ್ಟ ಸಚಿವರು ತಿಳಿಸಿದ್ದರೂ ಇಲ್ಲಿಯವರೆಗೆ ಸರ್ಕಾರದವರು ಕ್ರಮ ಕೈಗೊಳ್ಳದಿರಲು ಕಾರಣವೇನು,

ಆ) ಮುಂಬರುವ ಸಾಲಿನಲ್ಲಾದರೂ ಹಾಲಿ ಇರುವ ಹಾಗೂ ಹೊಸದಾಗಿ ಪ್ರಾರಂಭಿಸುವ ಶಾಲೆಗಳಿಗೆ ಸಾಕಷ್ಟು ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು). —

ಅ) ಕರ್ನಾಟಕ ೨ನೇ ಹಿಂದುಳಿದ ವರ್ಗಗಳ ಆಯೋಗದ ವರದಿಯ ಆಧಾರದ ಮೇಲೆ ಏೀಸ ಲಾತಿ ರೋಸ್ಟರ್ ಸರ್ಕಾರದಿಂದ ನಿರೀಕ್ಷಣೆಯಲ್ಲಿದ್ದ ಕಾರಣ ಜಿಲ್ಲಾ ಆಯ್ಕೆ ಸಮಿತಿಗಳ ಮೂಲಕ ತುಂಬಲಾಗಲಿಲ್ಲ. ಸಧ್ಯದಲ್ಲಿ ಇದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಆ) ಹೌದು